# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

ಓ.ಎಸ್ ಸಂಖ್ಯೆ. **954/2022** ಪಿ.ಡಬ್ಲ್ಯೂ .1

ದಿನಾಂಕಃ 11-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದಃ-

ರಾಮಯ್ಯನ 6 ಜನ ಮಕ್ಕಳ ಪೈಕಿ ಇಬ್ಬರು ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ಹೇಳಿದ್ದು ಸದರಿ ವಿಭಾಗ ಪತ್ರದ ನನ್ನ ಬಳಿ ಇಲ್ಲ. ಸದರಿ ವಿಭಾಗದಲ್ಲಿ ಯಾವ ಯಾವ ಆಸ್ತಿಗಳು ನನ್ನ ತಾತ ನವರಿಗೆ ಬಂದಿರುತ್ತದೆ ಎಂದರೆ ನೆನಪಿಲ್ಲ. ಸದರಿ ಇಬ್ಬರು ಮಕ್ಕಳು ವಿಭಾಗ ಮಾಡಿಕೊಂಡ ದಿನದಿಂದು ನನ್ನ ತಂದೆ ಮತ್ತು ಪ್ರತಿವಾದಿಗೆ ವಿಭಾಗ ಮಾಡಿಕೊಟ್ಟಿರುತ್ತಾರೆಯೇ ಎಂದರೆ ಇಲ್ಲ. ನನ್ನ ತಂದೆ ಮತ್ತು ಪ್ರತಿವಾದಿ ನಡುವೆ ಪಿತ್ರಾರ್ಜಿತ ಆಸ್ತಿಗಳ ಬಗ್ಗೆ ಯಾವುದೇ ವಿಭಾಗ ಆಗಿಲ್ಲ. ನನ್ನ ತಂದೆ ಮತ್ತು ಪ್ರತಿವಾದಿಗೆ ಸರ್ವೆ ನಂ. 83/1 ರಲ್ಲಿ 1 ಎಕರೆ 12 ಗುಂಟೆ ಜಮೀನನ್ನು ಭಾಗ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ ಅವರವರ ಭಾಗವನ್ನು ಸುಮಾರು ವರ್ಷಗಳ ಹಿಂದೆಯೇ ಮಾರಾಟ ಮಾಡಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ 4 ಜನ ಗಂಡು ಮಕ್ಕಳಿಗೆ 4 ನೇ ಒಂದು ಭಾಗ ಬಂದಿರುತ್ತದೆ. ನನ್ನ ಪ್ರಕಾರ ಸದರಿ ಜಮೀನು ವಿಭಾಗ ಆಗಿರುತ್ತದೆ ಎಂದರೆ ಹೌದು. ಸದರಿ ವಿಭಾಗ ಪತ್ರದಲ್ಲಿ ಎಲ್ಲಾ ಪಿತ್ರಾರ್ಜಿತ ಜಮೀನುಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸುಳ್ಳು. ಸದರಿ ಕಾಚರಕನಹಳ್ಳಿ ಗ್ರಾಮದ ಸರ್ವೆ ನಂ. 83/1 ರಲ್ಲಿ ನನ್ನ ತಂದೆಗೆ ಎಷ್ಟು ವಿಸ್ತೀರ್ಣ ಭಾಗವಾಗಿ ಬಂದಿರುತ್ತದೆ ಎಂದರೆ ನನಗೆ ನೆನಪಿಲ್ಲ. ದಿನಾಂಕಃ 04-01-1976 ರಲ್ಲಿ ನನ್ನ ತಂದೆ ಭಾಗಕ್ಕೆ ಬಂದ 27 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಹೌದು. ಪ್ರತಿವಾದಿ ಭಾಗಕ್ಕೆ ಬಂದ 25 ಗುಂಟೆ ಜಮೀನನ್ನು ದಿನಾಂಕಃ 06-10-1980 ರಂದು

ಮಾರಾಟ ಮಾಡಿರುತ್ತಾರೆ ಎಂದರೆ ಹೌದು. ಆದರೆ ದಿನಾಂಕ ನೆನಪಿಲ್ಲ. ಜಮೀನುಗಳನ್ನು ಹೊರತುಪಡಿಸಿ ನನ್ನ ತಂದೆಗೆ ವಿಭಾಗದಲ್ಲಿ ಎಷ್ಟು ನಿವೇಶನಗಳು ಮತ್ತು ಮನೆ ಜಾಗ ಬಂದಿರುತ್ತದೆ ಎಂದರೆ ಯಾವುದೇ ಆಸ್ತಿಗಳು ಬಂದಿಲ್ಲ.

ಈಗ ಓದಿ ಹೇಳಿದಂತೆ ದಿನಾಂಕಃ 26-10-1987 ರಂದು ನನ್ನ ತಂದೆ ತನ್ನ ಭಾಗಕ್ಕೆ ಬಂದ ಮನೆಯ ಆಸ್ತಿಯನ್ನು ತನ್ನ ಮಗಳ ಮದುವೆಗಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ಸದರಿ ಮನೆಯ ಆಸ್ತಿಯನ್ನು ನಾನು ಮತ್ತು ನನ್ನ ತಂದೆ ದಿನಾಂಕಃ 01-03-1999 ರಂದು ಪುನಃ ಖರೀದಿಸಿರುತ್ತೇವೆ ಎಂದರೆ ಸುಳ್ಳು. ಸದರಿ ಮನೆಯನ್ನು ಬೇರೆಯವರಿಗೆ ಪುನಃ ಮಾರಾಟ ಮಾಡಿರುತ್ತೀರಾ ಎಂದರೆ ಸುಳ್ಳು. ನನಗೆ ಕನ್ನಡ ಓದಲು ಬರುತ್ತದೆ. ಮೇಲೆ ಹೇಳಿದ ಮನೆಯನ್ನು ನಾನು, ನನ್ನ ತಂದೆ, ವಾದಿ 1 ಮತ್ತು 6 ರವರು ಎಲ್ಲರೂ ಸೇರಿ ದಿನಾಂಕಃ 08-12-2000 ದಲ್ಲಿ ಮಾರಾಟ ಮಾಡಿರುತ್ತೇವೆ ಎಂದರೆ ಸುಳ್ಳು. ಸದರಿ ಕ್ರಯ ಪತ್ರದಲ್ಲಿ 1, 6 ಮತ್ತು 7 ನೇ ವಾದಿಯಾದ ನಾನು ಸಮ್ಮತಿ ಸಾಕ್ಷಿಯಾಗಿ ಸಹಿ ಮಾಡಿರುತ್ತೇವೆ ಎಂದು ಬರೆದಿದೆ ಎಂದು ಸಾಕ್ಷಿಗೆ ಓದಿ ಹೇಳಲಾಗಿ ಸುಳ್ಳು ಎಂದು ನುಡಿಯುತ್ತಾರೆ. ಮೇಲಿನ ದಾಖಲೆಗಳ ಬಗ್ಗೆ ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ತನ್ನ ಭಾಗಕ್ಕೆ ಬಂದಂತಹ ಗದ್ದೆಯ ಆಸ್ತಿಗಳನ್ನು ಚಿನ್ನಪ್ಪ ಎಂಬುವವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸುಳ್ಳು. ಸದರಿ ಗದ್ದೆ ಜಮೀನುಗಳ ಪಕ್ಕದಲ್ಲಿಯೇ ದಾವಾ ಅಸ್ತಿಗಳು ಇದೆ ಎಂದರೆ ಹೌದು. ಸದರಿ ಚಿನ್ನಪ್ಪ ದಾವಾ ಆಸ್ತಿಗಳನ್ನು ತನಗೆ ಕ್ರಯಕ್ಕೆ ಕೊಡುವಂತೆ ಪ್ರತಿವಾದಿಯನ್ನು ಕೇಳಿದ್ದರು ಎಂದರೆ ಸುಳ್ಳು. ನಮಗೆ ಯಾವುದೇ ಭಾಗ ಬರಬೇಕಾಗಿಲ್ಲದೆ ಇದ್ದರು ಸಹ ನಮ್ಮನ್ನು ಹುಡುಕಿ ಮಾಹಿತಿ ನೀಡಿ ನಮ್ಮ ಮೂಲಕ ಈ ಸುಳ್ಳು ದಾವೆ ಸಲ್ಲಿಸಿರುತ್ತಾರೆ ಎಂದರೆ ಸುಳ್ಳು.

ನನ್ನ ಪ್ರಮಾಣ ಪತ್ರದಲ್ಲಿ ನನ್ನ ತಂದೆ ಮತ್ತು ಪ್ರತಿವಾದಿ 2015-16 ರ ವರೆಗೆ ಒಟ್ಟಿಗೆ ಇದ್ದರು ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿ ನಮ್ಮ ತಂದೆ 2006 ರಲ್ಲಿಯೇ ಮರಣ ಹೊಂದಿರುತ್ತಾರೆಂದು ನುಡಿಯತ್ತಾರೆ. ಸದರಿ ಅಂಶಗಳನ್ನು ಪ್ರಮಾಣ ಪತ್ರದಲ್ಲಿ ಹೇಳಿರುವುದು ಸುಳ್ಳಾಗಿರುತ್ತದೆ ಎಂದು ಹೇಳಿದರೆ ಸಾಕ್ಷಿ ತಪ್ಪಾಗಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. 2015-16 ರ ವರೆಗೆ ನಾವುಗಳು ಒಟ್ಟು ಕುಟುಂಬದಲ್ಲಿ ಇದ್ದೇವು ಎಂದು ತೋರಿಸಲು ದಾಖಲೆಗಳು ಇಲ್ಲ. ನನ್ನ ತಂದೆ ಮತ್ತು ಪ್ರತಿವಾದಿ ಸುಮಾರು 30 ವರ್ಷಗಳ ಹಿಂದೆಯೇ ಭಾಗ ಮಾಡಿಕೊಂಡು ಪ್ರತ್ಯಕವಾಗಿರುವ ಕಾರಣ ದಾಖಲೆಗಳನ್ನು ಕೊಡಲು ಆಗುವುದಿಲ್ಲ ಎಂದರೆ ಸುಳ್ಳು.

ಪ್ರತಿವಾದಿ ಅವಿಧ್ಯಾವಂತರಾಗಿದ್ದ ಕಾರಣ ತನ್ನ ಭಾಗಕ್ಕೆ ಬಂದ ಆಸ್ತಿಗಳನ್ನು ಖಾತೆ ಮಾಡಿಕೊಂಡಿಲ್ಲದೆ 2015-16 ರಲ್ಲಿ ಪೌತಿ ಖಾತೆ ಮಾಡಿಕೊಂಡಿರುತ್ತಾರೆ ಎಂದರೆ ಸುಳ್ಳು. ಸದರಿ ಪೌತಿ ಖಾತೆ ಆಧಾರದ ಮೇಲೆ ಆದ ಕಂದಾಯ ದಾಖಲೆಗಳ ಮೇಲೆ ಸಾಲ ಪಡೆದಿರುತ್ತಾರೆ ಎಂದರೆ ನಮ್ಮ ಗಮನಕ್ಕೆ ಬಾರದಂತೆ ಸಾಲ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸಾಲ ಪಡೆದಿರುವ ವಿಚಾರ ಈದುವರೆಗೂ ನಮ್ಮ ಗಮನಕ್ಕೆ ಬಂದಿರುವುದಿಲ್ಲ. ನಾನು ಹಾಜರು ಮಾಡಿರುವ ದಾಖಲೆಗಳಲ್ಲಿ ಪ್ರತಿವಾದಿ ಸಾಲ ಪಡೆದಿರುವ ಅಂಶ ನಮೂದಾಗಿರುವ ವಿಚಾರ ಗೊತ್ತಿದ್ದು ಪ್ರತಿವಾದಿ ತನ್ನ ಭಾಗದ ಆಸ್ತಿಗಳನ್ನು ಸಾಲ ಪಡೆದಿರುವ ಕಾರಣ ತಕರಾರು ಮಾಡಿರುವುದಿಲ್ಲ ಎಂದರೆ ಸುಳ್ಳು. ದಾವಾ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ಚಿನ್ನಪ್ಪನ ಒತ್ತಾಯಕ್ಕೆ ಅವರಿಗೆ ಸಹಾಯ ಮಾಡಲು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸುಳ್ಳು. ನನ್ನ ಪ್ರಮಾಣ ಪತ್ರದಲ್ಲಿ ಪ್ರತಿವಾದಿ ರೆವೆನ್ಯೂ ದಾಖಲೆಗಳನ್ನು ಬದಲಾವಣೆ ಮಾಡಿಕೊಂಡ ವಿಚಾರವನ್ನು ಗ್ರಾಮಸ್ಥರು ತಿಳಿಸಿದ್ದು ಸದರಿ ಗ್ರಾಮಸ್ಥರ ಹೆಸರನ್ನು ಹೇಳಲು ಆಗುವುದಿಲ್ಲ. ಸದರಿಪೌತಿ ಖಾತೆಯನ್ನು

ಕಂದಾಯ ಇಲಾಖೆಯಲ್ಲಿ ಪ್ರಶ್ನೆ ಮಾಡಿಲ್ಲ. ನಿಪಿ. 8 ಮತ್ತು 11 ರಲ್ಲಿ ನಮೂದಾಗಿರುವ ರಾಮಯ್ಯ ಬಿನ್ ಮುನಿಶ್ಯಾಮಿ ಎಂಬುವವರು ನನ್ನ ತಾತ ಎಂದರೆ ಸರಿ. ಯಾವುದೇ ಒಬ್ಬ ವ್ಯಕ್ತಿ ಜಮೀನಿನ ಸ್ವಾದೀನದಲ್ಲಿ ಇದ್ದಲ್ಲಿ ಅವರ ಹೆಸರು ಪಹಣಿಗಳ ಕಾಲಂ 12 ರಲ್ಲಿ ನಮೂದು ಮಾಡುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ. 8 ಮತ್ತು 11 ರಲ್ಲಿ ಪ್ರತಿವಾದಿಯ ಹೆಸರು ನಮೂದಾಗಿದ್ದು ನನ್ನ ತಂದೆಯ ಹೆಸರು ಇಲ್ಲ ಎಂದರೆ ಹೌದು. ಈ ಮೊದಲೇ ಭಾಗ ಆಗಿದ್ದ ಕಾರಣ ಪ್ರತಿವಾದಿಯ ಹೆಸರು ಮಾತ್ರ ನಮೂದಾಗಿದ್ದು ನನ್ನ ತಂದೆಯ ಹೆಸರು ನಮೂದಾಗಿಲ್ಲ ಎಂದರೆ ಸುಳ್ಳು.

ಸದರಿ ಪಹಣಿಗಳಲ್ಲಿ ನಮೂದಾಗಿರುವ ಸುಬ್ಬಮ್ಮ ನನ್ನ ತಾತನ 2 ನೇ ಹೆಂಡತಿ. ಅದೇ ರೀತಿ ಗಣಕೀಕೃತ ಪಹಣಿಗಳಲ್ಲಿಯು ಸಹ ಪ್ರತಿವಾದಿಯ ಹೆಸರು ನಮೂದಾಗಿದ್ದು ನನ್ನ ತಂದೆ ಹೆಸರು ಬರುತ್ತಿಲ್ಲ ಎಂದರೇ ಸುಳ್ಳು. ಈ ಹಿಂದೆಯೇ ಭಾಗ ಆಗಿದ್ದು ಪ್ರತಿವಾದಿ ಪ್ರತ್ಯಕ ಸ್ವಾದೀನದಲ್ಲಿದ್ದರು ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ಮತ್ತು ಪ್ರತಿವಾದಿ ನಡುವೆ ಈ ಹಿಂದೆಯೇ ವಿಭಾಗವಾಗಿದ್ದು ತನ್ನ ತಂದೆ ಭಾಗಕ್ಕೆ ಬಂದ ಎಲ್ಲಾ ಆಸ್ತಿಗಳನ್ನು ಮಾರಾಟ ಮಾಡಿದ್ದು, ಸದರಿ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.